ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 274
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ದಿನಾಂಕ : 06.07.2023
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆ ಜೀವನಾಡಿಯಾಗಿರುವ ಕಾರಂಜಾ ಜಲಾಶಯ ಎಷ್ಟು ರೈತರಿಗೆ ಹಾಗೂ ಸಾರ್ವಜನಿಕರಿಗೆ ಉಪಯೋಗವಾಗುತ್ತಿದೆ: ಈ ಡ್ಯಾಂಮಿನ ವಿಸ್ತೀರ್ಣ ಮತ್ತು ಶೇಖರಣೆ ಸಾಮರ್ಥ್ಯ ಎಷ್ಟು; ಸದ್ಯ ಶೇಖರಣೆಯಾಗುತ್ತಿರುವ ನೀರಿನ ಪ್ರಮಾಣ ಎಷ್ಟು; | ಬೀದರ ಜಿಲ್ಲೆಯ ಕಾರಂಜಾ ಯೋಜನೆಯಡಿ 27,266 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.<br>ಕಾರಂಜಾ ಜಲಾಶಯದ ಒಟ್ಟು ವಿಸ್ತೀರ್ಣ 6068 ಹೆಕ್ಟೇರ್ ಇದ್ದು, ನೀರು ಸಂಗ್ರಹಣಾ ಸಾಮರ್ಥ್ಯ 7.691 ಟಿಎಂಸಿ ಇರುತ್ತದೆ.<br>ಪ್ರಸ್ತುತ, ದಿನಾಂಕ:04.07.2023ರಂದು 4.854 ಟಿಎಂಸಿ ನೀರು ಸಂಗ್ರಹಣೆ ಇರುತ್ತದೆ. |
| ಆ. | ಈ ಯೋಜನೆಯಿಂದ ಉಪಯೋಗವಾಗದೆ ತೆಲಂಗಾಣ ರಾಜ್ಯಕ್ಕೆ ಎಷ್ಟು ಟಿ.ಎಂ.ಸಿ. ನೀರು ಹರಿದು ಹೋಗುತ್ತಿದೆ; ಇದರಿಂದ ನಮ್ಮ ರೈತರಿಗೆ ಅನ್ಯಾಯವಾಗುತ್ತಿಲ್ಲವೇ; ರೈತರ ಹಿತ ಕಾಪಾಡಲು ಸರ್ಕಾರ ಕೈಗೊಂಡ ಕ್ರಮವೇನು; | ಕಾರಂಜಾ ಜಲಾಶಯದ ಕಣಿವೆಯಲ್ಲಿ ನೀರಿನ ಕೊರತೆಯಿದ್ದು, ಕಾರಂಜಾ ಜಲಾಶಯಕ್ಕೆ ಕಳೆದ 10 ವರ್ಷಗಳಲ್ಲಿ ಕೇವಲ 2021ರಲ್ಲಿ ಮಾತ್ರ ಹಂಚಿಕೆಯಾದ 9.27 ಟಿ.ಎಂ.ಸಿ. ಗಿಂತಲೂ ಹೆಚ್ಚಿನ ಒಳಹರಿವು ದಾಖಲಾಗಿರುತ್ತದೆ. ಸದರಿ ವರ್ಷದಲ್ಲಿ ಮಾತ್ರ ಅಣೆಕಟ್ಟೆಯ ಸುರಕ್ಷತೆಯ ದೃಷ್ಟಿಯಿಂದ ನೀರನ್ನು ನದಿಗೆ ಹರಿಸಲಾಗಿರುತ್ತದೆ. ಉಳಿದಂತೆ ಸಂಗ್ರಹವಾಗುವ ನೀರನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. |
| ಇ. | ನೀರು ಪೋಲಾಗದಂತೆ ಕಾರಂಜಾ ಜಲಾಶಯಕ್ಕೆ ಅಡ್ಡಲಾಗಿ ಇನ್ನೂ ಹೆಚ್ಚು ಬ್ಯಾರೇಜ್‌ಗಳನ್ನು ಕಟ್ಟುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ? | ಕಾರಂಜಾ ನದಿಗೆ ಹೆಚ್ಚುವರಿ ಬ್ಯಾರೇಜುಗಳನ್ನು ನಿರ್ಮಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ:ಜಸಂಇ 58 ಎಂಎಲ್‌ಎ 2023

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿಗಳು.